# ಹಳ್ಳಿ ಮಣ್ಣಿನಲ್ಲಿ ಮನೋಜ್ ಹೆಜ್ಜೆಗುರುತು



ಪತ್ನಿ ಶಬಾನಾ ರಾಜಾ, ಪುತ್ರಿ ಅವಾ ನೈಲಾ ಜೊತೆ ಮನೋಜ್ ವಾಜಪೇಯಿ

ಬಿಹಾರದ ಹಳ್ಳಿ ಬೇಲ್ವಾದಲ್ಲಿ ಈ ಬಾರಿ ಹೊಸ ವರ್ಷದ ಹರ್ಷಕ್ಕೆ ಅಭ್ಯಾಗತರೊಬ್ಬರ ಚಲನವಲನಗಳು ಮೆರುಗು ನೀಡಿದ್ದವು. ಆ ಅಭ್ಯಾಗತರೇ ನಟ ಮನೋಜ್ ವಾಜಪೇಯಿ. ಅವರು ಹಳ್ಳಿಯಲ್ಲಿ ತಾವು ಓದಿದ ಶಾಲೆಗೆ ಭೇಟಿ ನೀಡಿ, ಮಕ್ಕಳ ಜೊತೆ ಸಂವಾದ ನಡೆಸಿದರು. ಟ್ರ್ಯಾಕ್ಟರ್ ಮೇಲೆ ಕುಳಿತು ತಮ್ಮ ಕುಟುಂಬದವರನ್ನು ಹೊಲದಲ್ಲಿ ಸುತ್ತಾಡಿಸಿದರು. ಮಣ್ಣಿನ ಘಮ ಹೀರಿದರು. ಆಪ್ತೇಷ್ಟರನ್ನು ಆಲಿಂಗಿಸಿದರು. ಬಿಹಾರಿ ಶೈಲಿಯ ಮಾತಿನಲ್ಲೇ ಎಲ್ಲರೊಳಗೆ ಒಂದಾಗಿ ಬಂದರು.

ಮನೋಜ್ ವಾಜಪೇಯಿ ಅವರ ತಂದೆ–ತಾಯಿ ಈಗ ಇಲ್ಲ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಇಬ್ಬರೂ ಅಸುನೀಗಿದರು. ಸಹೋದರರ ಕುಟುಂಬಗಳು ಆ ಮನೆಯಲ್ಲಿ ಇವೆ. ಹೀಗಾಗಿ ಆಗಾಗ ತವರೂರಿಗೆ ಭೇಟಿ ನೀಡುವುದು ಮನೋಜ್ ಅವರಿಗೆ ಖುಷಿಯ ವಿಷಯ.

ಅವರು ಈ ಸಲ ಹೊಸ ವರ್ಷ ಪ್ರಾರಂಭವಾಗುವ ಕೆಲವು ದಿನಗಳ ಮೊದಲೇ ತಮ್ಮ ಹುಟ್ಟೂರಲ್ಲಿ ಇದ್ದರು.

'ನಾನು ತುಂಬಾ ಚಿಕ್ಕ ಪ್ರಾಯದಲ್ಲಿಯೇ ಊರನ್ನು ಬಿಟ್ಟೆ. ಮುಂಬೈ ನಗರದ ಬದುಕಿಗೆ ಒಡ್ಡಿಕೊಂಡೆ. ಇಲ್ಲಿಗೆ ಬಂದಾಗಲೆಲ್ಲ ನನಗೆ ಉತ್ಸಾಹ ಮರುಪೂರಣವಾದಂತೆ ಆಗುತ್ತದೆ. ಇಲ್ಲಿ ನನ್ನನ್ನು ಊರಿನ ಮಗನಂತೆ ನೋಡುತ್ತಾರೆಯೇ ವಿನಾ ಸೆಲೆಬ್ರಿಟಿ ಎಂದೆಲ್ಲ ಭಾವಿಸುವುದಿಲ್ಲ. ಅದೇ ನನಗೆ ಖುಷಿ. ನಮ್ಮೂರಿಗೆ ನಾವು ಬಂದಾಗ ಎಲ್ಲಿಂದಲೋ ಬಂದವರಂತೆ ನಾವೂ ಆಗಿಬಿಟ್ಟೆವಲ್ಲ ಎಂಬ ಸಂಗತಿ ಹೆಚ್ಚು ಕಾಡುತ್ತದೆ. ಬದುಕಿನಲ್ಲಿ ಹುಟ್ಟಿದ ಊರಿನಿಂದ ದೂರ ಹೋಗಿ, ಇನ್ನಾವುದೋ ಊರಿನಲ್ಲಿ ನೆಲೆಸುವ ಅನಿವಾರ್ಯ ಈ ಕಾಲದಲ್ಲಿ ಇದೆಯಾದರೂ, ಆಗೀಗ ನನ್ನೂರಿಗೆ ನಾನೇ ಹೊರಗಿನವ ಆಗಿ ಇರುವುದು ಒಂದು ಬಗೆಯಲ್ಲಿ ಸಂಕಟದ ಸಂಗತಿಯಂತೂ ಹೌದು' ಎಂದು ಮನೋಜ್ ವಾಜಪೇಯಿ ಅನುಭವ ಹಂಚಿಕೊಂಡರು.

ಬಾಲ್ಯದ ದಿನಗಳನ್ನು ಮೆಲುಕುಹಾಕುವಂತೆ ಮಾಡುವ ಊರಿನ ಅನೇಕ ಸಂಗತಿಗಳು ಅವರ ಸ್ಮೃತಿಪಟಲದಲ್ಲಿವೆ. 'ನನಗೆ ಅಪ್ಪ–ಅಮ್ಮ ಇದ್ದಾಗ ಇಲ್ಲಿಗೆ ಬರುವುದು ಇನ್ನೂ ಹೆಚ್ಚು ಖುಷಿ ತರುತ್ತಿತ್ತು. ಈಗ ಉಳಿದವರೆಲ್ಲರೂ ಇದ್ದರೂ ಅವರಿಲ್ಲದ ಮನೆ ಯಾಕೋ ಖಾಲಿ ಖಾಲಿ ಎನಿಸುತ್ತದೆ'. ■

# ರಾಮಮಂದಿರ ಸಂಭ್ರಮಕ್ಕೊಂದು ಸಿನಿಮಾ



ರಾಮಮಂದಿರದ ಉದ್ಘಾಟನೆ ಸಮಾರಂಭವು ಸುದ್ದಿಯಲ್ಲಿರುವ ಸಂದರ್ಭದಲ್ಲಿಯೇ 'ಸಿಕ್ಸ್ ನೈನ್ ಫೈವ್' (695) ಶೀರ್ಷಿಕೆಯ ಹಿಂದಿ ಸಿನಿಮಾವೊಂದು ಜನವರಿ 19ರಂದು ತೆರೆಗೆ ಬರಲಿದೆ.

ಅಯೋಧ್ಯೆಯ ರಾಮಮಂದಿರ ನಿರ್ಮಾಣದ ಹಿಂದಿನ ಐದುನೂರು ವರ್ಷಗಳ ಹೋರಾಟದ ಕಥೆಯನ್ನು ಈ ಸಿನಿಮಾ ಒಳಗೊಂಡಿದೆ ಎಂದು ನಿರ್ದೇಶಕ ಯೋಗೇಶ್ ಭಾರದ್ವಾಜ್ ಹೇಳಿಕೊಂಡಿದ್ದಾರೆ.

'ರಾಮಾಯಣ' ಧಾರಾವಾಹಿಯಲ್ಲಿ ರಾಮನ ಪಾತ್ರದಲ್ಲಿ ಅಭಿನಯಿಸಿ ಜನಪ್ರಿಯರಾಗಿದ್ದ ಅರುಣ್ ಗೋವಿಲ್ ಈ ಸಿನಿಮಾದ ಪ್ರಮುಖ ಪಾತ್ರಧಾರಿ. ಅವರಲ್ಲದೆ, ಮುಕೇಶ್ ತಿವಾರಿ, ಮನೋಜ್ ಜೋಶಿ, ಅಖಿಲೇಂದ್ರ ಮಿಶ್ರ, ಗೋವಿಂದ್ ನಾಮ್‌ದೇವ್ ತಾರಾಗಣದಲ್ಲಿ ಇದ್ದಾರೆ.

1997ರಲ್ಲಿ ತೆರೆಕಂಡ 'ಬಾರ್ಡರ್' ಹಿಂದಿ ಸಿನಿಮಾದ ಸಹಾಯಕ ನಿರ್ದೇಶಕರಲ್ಲಿ ಒಬ್ಬರಾಗಿದ್ದವರು ಯೋಗೇಶ್ ಭಾರದ್ವಾಜ್. 'ಬಾರ್ಡರ್ ಹಿಂದೂಸ್ತಾನ್ ಕಾ', 'ಶಬ್‌ನಮ್ ಮೌಸಿ' ಎಂಬ ಹಿಂದಿ ಸಿನಿಮಾಗಳನ್ನು ಅವರು ನಿರ್ದೇಶಿಸಿದ್ದಾರೆ.

'ನಮ್ಮ ಸಾಂಸ್ಕೃತಿಕ ಪರಂಪರೆ ಹಾಗೂ ನಂಬಿಕೆಗೆ ಸಂದಿರುವ ಗೆಲುವಿನ ಸಂಭ್ರಮಾಚರಣೆಯ ರೂಪದಲ್ಲಿ ಈ ಸಿನಿಮಾ ತೆರೆಕಾಣುತ್ತಿದೆ. ನನ್ನ ದೃಷ್ಟಿಯಲ್ಲಿ ಇದು ಕೇವಲ ಸಿನಿಮಾ ಅಷ್ಟೇ ಅಲ್ಲ, ಅಸಂಖ್ಯಾತ ಜನರ ಭಾವುಕ ಕ್ಷಣಗಳಿಗೆ ಸಿಗುತ್ತಿರುವ ಸ್ಪಂದನ' ಎನ್ನುವುದು ಅರುಣ್ ಗೋವಿಲ್ ಪ್ರತಿಕ್ರಿಯೆ.

'ದಶಕಗಳ ಹೋರಾಟದ ಹಿಂದಿನ ಕತೆಯನ್ನು ಜನರ ಮುಂದೆ ಬಿಚ್ಚಿಡಲು ಇದು ಸುಸಮಯ. ವಿಜಯೋತ್ಸವಕ್ಕೆ ಇದು ಮೆರುಗು ನೀಡುವಂತಹ ಚಿತ್ರ' ಎಂದು ನಿರ್ಮಾಪಕ ಶ್ಯಾಮ್ ಚಾವ್ಲಾ ಖುಷಿ ಹಂಚಿಕೊಂಡಿದ್ದಾರೆ. ತಮಾಷೆ ಏನೆಂದರೆ, 'ಬುಕ್ ಮೈ ಶೋ' ವೆಬ್‌ಸೈಟ್‌ನಲ್ಲಿ ಈ ಸಿನಿಮಾಗೆ ಕೆಲಸ ಮಾಡಿರುವ ಇತರ ತಂತ್ರಜ್ಞರ ಮಾಹಿತಿಯೇ ಲಭ್ಯವಿಲ್ಲ. ■